ಅವಳೇ...' ಅಂದ್ ಬಿಡಾದಾ... ನಾನು ಆ ಊರಿಗೆ ಹೋಗಿ ನಾಲ್ಕು ವರ್ಷ ಆಗಿತ್ತು ಕಣಕ್ಕ. ಅಪರೂಪಕ್ಕೆ ಅಕ್ಕ ಬಂದವ್ಳೆ ಅನ್ನೋ ಗ್ಯಾನಾನೂ ಇಲ್ಲದೇ, ಹೆಂಡ್ತಿ ಮಕ್ಳು ಕಟ್ಕಂಡು ಬಸ್ಸು ಹತ್ತೇಬಿಟ್ಟ. ಬಸ್ಸು ಒಂಟೋಯ್ತು. ಶಾನೇ ಬೇಜಾರಾತು ಕಣಕ್ಕ. ಅಲ್ಲೇ ಊರಮ್ಮನ ದೇವಸ್ಥಾನ. ಅಲ್ಲಿಗೋಗಿ ಒಂದ್ಹೈದು ನಿಮಿಷ ಅಮ್ಮನ ತಾವ ನಿಂತ್ಕಂಡು ಕಣ್ಣೀರು ಹಾಕಿದೆ. ಎದೇಲಿ–ಹೊಟ್ಟೇಲಿ... ಒಂಥರಾ ಸಂಕಟ. ನಾವು ಪ್ರೀತಿ–ವಿಶ್ವಾಸ ಎದೆ ತುಂಬಾ ತುಂಬ್ಕಂಡು ಓಗಿರ್‌ತೀವಿ. ಅದನ್ನ ಎಡಗಾಲಲ್ಲಿ ಒದ್ದಂಗೆ ಆಗೋದ್ರೆ ಎಂಗಾಯ್ತದೆ ಹೇಳೀ...'

'ಹೂಂ... ನಿಜಾ ಕಣೇ...'

'ಅಂಗೇ ವಾಪಸ್ಸು ಬೆಂಗ್ಳೂರಿಗೆ ಒಂಟೋಗಾನಾ ಅಂದ್ಕಂಡೆ. ಅವ್ವನ ನೆನಪಾಯ್ತು. ಸೀದಾ ಮನೆಗೋದೆ. ಅವ್ವನ್ನ ಮುಂದಿನ ವರಾಂಡದಲ್ಲಿ ಬಿಟ್ಟು ಮನೆಗೆ ಬೀಗ ಹಾಕ್ಕೊಂಡು ಹೋಗಿದ್ರು. ಅವ್ವಂಗೆ ಶಾನೇ ವಯಸ್ಸಾದಂಗೆ ಕಾಣ್ತಿತ್ತು. ನನ್ನ ನೋಡ್ತಿದ್ದಂಗೆ ಬಿಕ್ಕಳಿಸಿ– ಬಿಕ್ಕಳಿಸಿ ಅತ್‌ಬಿಟ್ಲು. 'ತಾಯೀ, ಬಂದೇನೇ ಮಗಾ... ನಿನ್ನನ್ನ ನೋಡದೇನೇ ಅಂಗೇ ಸತ್ತೋಗ್ತೀನೀ ಅಂದ್ಕಂಡಿದ್ದೆ ಕಣೇ... ಮಗಾ ಎಂಗೈತೆ... ಅಳಿಯ ಸಂದಾಗವ್ನ... ಮೊಮ್ಮಗ ಎಂಗೈತೆ...' ಅಂತ ಕೆನ್ನೆಸವರಿ ತಲೆ ಸವರಿ ಮಾತಾಡಿಸಿದ್ಲು. 'ಕೈಕಾಲು ಮಕ ತೊಳ್ಕಂಬಾ ಮಗ... ರೊಟ್ಟಿ ಮಡಗವಳೇ... ತಿನ್ನುವೆಯಂತೇ...' ಅಂತ ಉಪಚಾರ ಮಾಡಿದ್ಲು... ಪಕ್ಕದ ಮನೆ ಲಕ್ಷ್ಮಕ್ಕನನ್ನು ಕೂಗಿ, 'ವಸೀ ಟೀ ಕಾಯಿಸಿ ಕೊಡು ಮಗಳು ತಾಯವ್ವ ಬಂದವ್ಳೆ... ಎಷ್ಟೋ ವರ್ಸ ಆಗಿತ್ತು ಕನವ್ವ... ನನ್ನ ಮಗಾ ಮನಿಗ್ ಬಂದು... ನನ್ ಸೊಸಿಗೆ ಹೇಳ್ದೆ... ಅವಳಿಗೆ ಅವಳ ತಂಗಿ ಮನೆ ನಾಮಕರಣ ಹೆಚ್ಚಾಯ್ತು. ಒಂಟೋದ್ಲು... ಅಂತೆಲ್ಲ ಹೇಳಿಕೊಳ್ತು. ಕೈನಲ್ಲಿ ಊರುಗೋಲು ಹಿಡಿದು ಅಂಗಳಕ್ಕೆ ಬಂದು ಕೂತ್ಕಂಡು– ಬೀದೀಲಿ ಹೋಗೋ ಪರಿಚಯಸ್ಥರಿಗೆಲ್ಲ ಮಗಳು ಬಂದವ್ಳೇ... ಅಂತ ಹಿಗ್ಗಿ ಹೀರೇಕಾಯಾಗಿ ಹೇಳ್ತು. ನಾನು ತಗಂಡು ಹೋಗಿದ್ದ ದ್ರಾಕ್ಷಿ–ಜಿಲೇಬಿ ಎಲ್ಲವುದನ್ನು ಖುಷಿಯಾಗಿ ಬಾಯಾಡಿಸಿಕೊಂಡು ತಿಂತು.

ಆಗ್ಲೇ ಯಾರೋ ಹುಡುಗ ಓಡ್ಕಂಡು ಬಂದು ಹೇಳಿದ: 'ಅಜ್ಜೀ, ಬಸ್ಸು ಆಕ್ಸಿಡೆಂಟಾಯ್ತಂತೆ. ತಮ್ಮಯ್ಯನ್ನು–ಅವನ ಯೆಡ್ತೀಗೂ ಆಸ್ಪತ್ರೆಗೆ ಕರಕೊಂಡೋದ್ರಂತೇ' ಅಂತ. ನಾನು ದಿಗ್ಗಂತ ಎದ್ದು ನಿಂತ್ಕಂಡೆ.

ಅಯ್ಯಯ್ಯೋ... ನನ್ನ ತಮ್ಮ ನನ್ನ ಸರಿಯಾಗಿ ವಿಚಾರಣೆ ಮಾಡಲಿಲ್ಲಾಂತ ಹೊಟ್ಟೇ ಉರಿನಲ್ಲಿ ಶಾಪ ಹಾಕ್‌ಬಿಟ್ನೋ ಏನ್ ಕತೆಯೋ... ಊರಮ್ಮನ ಗುಡಿ ಮುಂದೆ ಕಣ್ಣೀರು ಹಾಕ್‌ಬಿಟ್ನಲ್ಲ. ನನ್ನ ಎದೇ ಸಂಕಟಕ್ಕೆ– ನನ್ನ ಹೊಟ್ಟೆ ಉರಿಗೆ ಅವನಿಗೆ ಕೇಡಾಯ್ತೋ ಏನೋ ಅಂದ್ಕಂಡಿದ್ದೇಯಾ... ಧಡ ಧಡಾಂತ ಊರಮ್ಮನ ದೇವಸ್ಥಾನಕ್ಕೆ ಓಡಿ ಹೋಗಿ– ನನ್ನ ಸೀರೆ ಸೆರಗು ಹರಿದು ಒಂದು ರೂಪಾಯಿ ನಾಣ್ಯ ಇಟ್ಟು, 'ತಾಯೀ ನಮ್ಮವ್ವ ನನ್ನ ತವರ್ನ ಉಳಿಸ್ಕೊಡು... ನನ್ನ ತಮ್ಮ ತಮ್ಮನೆಂಡ್ತಿ ಉಸಾರಾಗಿ ಮನೆಗೆ ಬರೋ ಅಂಗೆ ಮಾಡು ತಾಯೀ... ಪ್ರತೀ ಶುಕ್ರವಾರ ನಿನ್ನೆಸ್ರಲ್ಲಿ ಒಪ್ಪತ್ತು ಮಾಡ್ತೀನಿ...' ಅಂತ ಹರಕೆ ಕಟ್ಕಂಡು ಮುಡಿಪು ಕಟ್ಟಿ ಹುಂಡಿಗೆ ಹಾಕಿ ಬಂದೆ. ನನ್ ಮೇಲೆ ನಂಗೇ ಬೇಜಾರು ಆಗ್ ಹೋಯ್ತು ಕಣಕ್ಕ. ನನ್ನ ಬೆನ್ನಿಗೆ ಬಿದ್ದವ್ನು ಎಲ್ಲೋ ಒಂದ್ಕಡೆ ಚೆನ್ನಾಗಿರಬೇಕು ಅಲ್ವರಾ... ಯೆಂಗೂ ಅವ್ವನ್ನ ನೋಡಾಯ್ತು... ತಮ್ಮ–ತಮ್ಮನ ಯೆಂಡ್ರು ನಳ್ಕಂಡು, ಕೊರಕ್ಕೊಂಡು ಬಂದ್ರು... ಅತ್ತಿಗೆಮ್ಮ–ಮಗಳ್ನ ಕರ್ಕೊಂಡು ಬನ್ನಿ...' ಅಂದ್ಲು ನಾದಿನಿ. ಸೈ ಅಂದ್ಕಂಡಿದ್ದೇಯಾ ವತ್ತಾರಿಕೇ ಎದ್ದು ತಿಂಡಿ ತಿಂದ್ಕಂಡು ಬಂದ್‌ಬಿಟ್ಟೆ ಕಣಕ್ಕ... ಯಾವತ್ತೂ ತಿಳ್ಕಳೀ... ಹೆಣ್ಣುಮಕ್ಳು ನೊಂದ್ಕಂಡು ಉಸ್ಸಂತು ಉಸ್ರು ಬಿಡಬಾರದು. ಅದರ ಶಾಪ ತಟ್ಟಿಯೇ ತಟ್ಟುತ್ತೆ... ಅನ್ನೋದು ಗೊತ್ತಾಗ್‌ಬುಡ್ತು ಕಣಕ್ಕ... ಕೆಟ್ರೆ ಏನ್ ಬಂತು ಭಾಗ್ಯ... ನಗ ನಗ್ತಾ ಇದ್ರೆ ಒಂದಲ್ಲ ಒಂದಿನ ನಾ...